**ದಿನಾಂಕಃ 25.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2ನೇ ಎದುದಾರರ ಪರ ಮಾನ್ಯ ವಕೀಲರಿಂದ.**

ನನ್ನ ಮಗ ಶಿವಗಂಗ ಪ್ರೌಢ ಶಾಲೆಯಲ್ಲಿ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದನು. ಆತನಿಗೆ 14 ವರ್ಷ ಆಗಿತ್ತು. ನನ್ನ ಮನೆಯಿಂದ ಮಗನ ಶಾಲೆಗೆ ಸುಮಾರು ಮೂರು ಕಿಲೋ ಮೀಟರ್ ಆಗುತ್ತದೆ. ನನ್ನ ಮಗ ನಡೆದುಕೊಂಡು ಶಾಲೆಗೆ ಹೋಗುತ್ತಿದ್ದನು. ಕುಶಾಲ್ ಮತ್ತು ನಿತಿನ್ ಎಂಬುವವರು ನನ್ನ ಮಗ ಹೋಗತ್ತಿದ್ದ ಶಾಲೆಯಲ್ಲಿಯೇ ವ್ಯಾಸಂಗ ಮಾಡುತ್ತಿದ್ದರು. ಶಾಲೆ ಸಂಜೆ 4.30 ಗಂಟೆಗೆ ಬಿಡುತ್ತದೆ. ಅಪಘಾತದ ಬಗ್ಗೆ ಸಾರ್ವಜನಿಕರು ಸಂಜೆ 6.00 ಗಂಟೆಯ ಸಮಯದಲ್ಲಿ ನನಗೆ ಮಾಹಿತಿ ನೀಡಿದರು. ಅಪಘಾತದ ಬಗ್ಗೆ ನಾನೇ ದೂರನ್ನು ನೀಡಿರುತ್ತೇನೆ. ನಾನು ಬೈಕಿನ ಮಧ್ಯದಲ್ಲಿ ಕುಳಿತಿದ್ದ ಧನುಷ್ ರವರ ತಂದೆ ಎಂದರೆ ಸರಿ. ದೂರಿನ ಸಂಗತಿಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ವಾಹನವನ್ನು ನಿತಿನ್ ಚಾಲನೆ ಮಾಡುತ್ತಿದ್ದನು. ನಿತಿನ್ ಚಾಲನೆ ಮಾಡುತ್ತಿದ್ದ ಹಿಂಭಾಗದಲ್ಲಿ ಧನುಷ್ ಇದ್ದು, ಆತನ ಹಿಂಭಾಗದಲ್ಲಿ ಕುಶಾಲ್ ಕುಳಿತಿದ್ದನು ಎಂದರೆ ಸರಿ. ನಿತಿನ್ ಮತ್ತು ಧನುಷ್ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದರು. ಆ ದಿನ ಬೈಕಿನಲ್ಲಿದ್ದ ಮೂವರೂ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತ ಹೇಗೆ ಸಂಭವಿಸಿತು ಎಂದು ಸಾರ್ವಜನಿಕರ ಮೂಲಕ ತಿಳಿದು ಬಂದಿರುತ್ತದೆ. ನನಗೆ ಅಪಘಾತ ಹೇಗೆ ಸಂಭವಿಸಿತು ಎಂದು ಗೊತ್ತಿಲ್ಲ ಮತ್ತು ಅಪಘಾತವನ್ನು ಕಣ್ಣಾರೆ ನೋಡಿಲ್ಲ, ಆದರೆ ಗ್ರಾಮಸ್ಥರಿಂದ ತಿಳಿದುಕೊಂಡಿರುತ್ತೇನೆ. ನಿತಿನ್ ಚಾಲನೆ ಮಾಡುತ್ತಿದ್ದ ಬೈಕು ಆತನ ತಾಯಿಗೆ ಸೇರಿತ್ತು. ನಿಪಿ 9 ಅನ್ನು

ವಾಹನದ ಮಾಲೀಕರಾದ ಕೆಂಪಮ್ಮರವರ ವಿರುದ್ದವೂ ಸಹ ಸಲ್ಲಿಸಲಾಗಿದೆ ಎಂದರೆ ಸರಿ. ಬೈಕಿನಲ್ಲಿ ಹೋಗುತ್ತಿದ್ದ ಮೂವರೂ ಸಹ ಅಪ್ರಾಪ್ತ ವಯಸ್ಕರಾಗಿದ್ದರು ಎಂದರೆ ಸರಿ. ವಾಹನ ಚಾಲನೆ ಮಾಡುತ್ತಿದ್ದ ನಿತಿನ್ ರವರ ವಿರುದ್ದವೂ ಸಹ ಅಂತಿಮ ವರದಿ ಸಲ್ಲಿಸಲಾಗಿದೆ ಎಂದರೆ ಸರಿ. ಅಪಘಾತವಾದ ಸ್ಥಳದಿಂದ ಮಗನ ಶಾಲೆ ಸುಮಾರು 1 ಕೀ.ಮಿ ಅಂತರದಲ್ಲಿದೆ. 4 ರಸ್ತೆ ಸೇರುವ ಮಾರ್ಗದ ಮಧ್ಯಭಾಗದಲ್ಲಿ ಅಪಘಾತ ಸಂಭವಿಸಿದ ಬಗ್ಗೆ ನಕಾಶೆ ತೋರಿಸಲಾಗಿದೆ ಎಂದರೆ ಸರಿ. ಬೈಕು ಜಿಂಕ್ ಶೀಟ್ ಕಾಂಪೌಂಡ್ ಗೆ ಅಪ್ಪಳಿಸಿದ ಪರಿಣಾಮ ಗಾಯಗಳು ಆಗಿರುತ್ತದೆ ಎಂದರೆ ಸರಿಯಲ್ಲ. ಆಪಾದಿತ ವಾಹನದ ಚಾಲಕನ ತಪ್ಪಿನಿಂದ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಬೈಕಿನಲ್ಲಿ ಮೂವರು ಹೋಗುತ್ತಿದ್ದು, ನಿತಿನ್ ಗೆ ಚಾಲನಾ ಪರವಾನಗಿ ಇಲ್ಲದ ಪರಿಣಾಮ ಆತನ ಅಜಾಗರೂಕತೆಯಿಂದ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ.

ವೈದ್ಯಕೀಯ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲಾತಿಗಳಲ್ಲಿ ನಿತಿನ್ ಅತೀವೇಗವಾಗಿ ವಾಹನ ಚಾಲನೆ ಮಾಡುತ್ತಿದ್ದ ಬಗ್ಗೆ ಉಲ್ಲೇಖ ಇದೆ ಎಂದರೆ ಸರಿಯಲ್ಲ. ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ವೈದ್ಯಕೀಯ ವೆಚ್ಚವನು ಆಪಾದಿತ ವಾಹನದ ಮಾಲೀಕರು ನೋಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಚಿಕಿತ್ಸೆಗೆ ನಾನು ಹೇಳಿರುವಷ್ಟು ಹಣ ಖರ್ಚು ಆಗಿಲ್ಲ ಎಂದರೆ ಸರಿಯಲ್ಲ. ಚಿಕಿತ್ಸಾ ವೆಚ್ಚ ಸಂಪೂರ್ಣವಾಗಿ ಮರುಪಾವತಿಯಾಗಿದೆ ಎಂದರೆ ಸರಿಯಲ್ಲ. ಇತ್ತೀಚೆಗೆ ನನ್ನ ಮಗನಿಗೆ

ಪರೀಕ್ಷೆ ಮಾಡಿ ಚಿಕಿತ್ಸೆ ಕೊಡಿಸಿದ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ. ನನ್ನ ಮಗ ಈಗ ಶಾಲೆಗೆ ಹೋಗುತ್ತಿಲ್ಲ. ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಮಗ ಈಗಲೂ ಶಾಲೆಗೆ ಹೋಗುತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನಿಗೆ ಯಾವುದೇ ತೊಂದರೆಗಳು ಇಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಪೊಲೀಸರೊಂದಿಗೆ ಶಾಮೀಲಾಗಿ ಆಪಾದಿತ ವಾಹನದ ಚಾಲಕನ ವಿರುದ್ದ ಸುಳ್ಳು ದೂರು ನೀಡಿ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸುವಂತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**